**ಕರ್ನಾಟಕ ಸರ್ಕಾರ**
**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ,**
**ಬೆಂಗಳೂರು-560001**

ಸಂಖ್ಯೆ: ಜಂ.ನಿ(ಆಡಳಿತ) ಖಾಯಂ.ಪೂ.ಸೇ.ಘೋ/1/2021-22 ದಿನಾಂಕ:08-11-2022

**ಜ್ಞಾಪನ**

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿನ ಸಿ ವೃಂದದ ಲಿಪಿಕ ನೌಕರರುಗಳ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣಿತಿ ಹೊಂದಿರುವ ಕುರಿತು ಲಿಖಿತ ಪರೀಕ್ಷೆಯನ್ನು ಆಯಾ ಡಯಟ್ ಗಳ ಮುಖಾಂತರ ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ : :1. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ5(7) ಖಾ.ಪೋ.ಸೇ.ಘೋ.ಕು:2021-22 ದಿನಾಂಕ:04-01-2022.
2.ಈ ಕಛೇರಿ ಜ್ಞಾಪನ ಸಮ ಸಂಖ್ಯೆ: ದಿನಾಂಕ:07/02/2022.
3.ಈ ಕಛೇರಿ ಜ್ಞಾಪನ ಸಮಸಂಖ್ಯೆ ದಿನಾಂಕ 16-08-2022 ಮತ್ತು 23-09-2022
4.ದಿನಾಂಕ 05/11/2022ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಪುನರಾವಲೋಕನ ಸಭೆಯಲ್ಲಿನ ಸೂಚನೆ.

~ ~ ~

ವಿಷಯದನ್ವಯ ಉಲ್ಲೇಖಿತ ಜ್ಞಾಪನಗಳಲ್ಲಿ ಈಗಾಗಲೇ ಆಯಾ ಜಿಲ್ಲೆಗೆ ಸಂಬಂಧಪಟ್ಟ ಮತ್ತು ಕೇಂದ್ರ ಕಛೇರಿಗಳಿಗೆ ಸಂಬಂಧಪಟ್ಟಂತೆ ಆಯಾ ವ್ಯಾಪ್ತಿಯ ಡಯಟ್‌ಗಳ ಮುಖಾಂತರ ಅಧಿಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಹಾಗೂ ಸಿಬ್ಬಂದಿಗಳಿಗೆ ಕಾರ್ಯಕ್ಷಮತೆ ಹೆಚ್ಚಿಸಲು ತರಬೇತಿ ಹಮ್ಮಿಕೊಂಡು ಮೌಲ್ಯ ಮಾಪನ ನಡೆಸಲಾಗುತ್ತಿದೆ.

ಪ್ರತಿ ಮಾಹೆವಾರು ಪರೀಕ್ಷೆಯಲ್ಲಿನ ಅಂಕಗಳಲ್ಲಿ ಹೆಚ್ಚಳ ಇದೆಯೇ ಎಂಬುದನ್ನು ಕಡ್ಡಾಯವಾಗಿ ಆಯಾ ಉಪನಿರ್ದೇಶಕರು/ಕಛೇರಿ ಮುಖ್ಯಸ್ಥರು ಗಮನಿಸತಕ್ಕದ್ದು, ಇನ್ನು ಮುಂದಿನ ಪರೀಕ್ಷೆಗೆ ಶೇಕಡ 60 ರ ಕನಿಷ್ಠ ಅಂಕಗಳ ಗಳಿಕೆಯನ್ನು ಕಡ್ಡಾಯಗೊಳಿಸಿದೆ. ಈ ಬಗ್ಗೆ ಆಯಾ ಕಛೇರಿಯ ಮುಖ್ಯಸ್ಥರು ಮೌಲ್ಯಮಾಪನ ನಂತರದ ಸಿಬ್ಬಂದಿವಾರು ಅಂಕಗಳ ತುಲನೆಯಲ್ಲಿ ಶೇಕಡ 60 ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿರುವ ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಹಮ್ಮಿಕೊಂಡು ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಕ್ರಮ ವಹಿಸುವಂತೆ ಸೂಚಿಸಿದೆ.

ಡಿಸೆಂಬರ್ ಮೊದಲ ವಾರದಲ್ಲಿ ಎಲ್ಲಾ ಸಿಬ್ಬಂದಿಗಳಿಗೆ ಸಾಮಾನ್ಯ ಪರೀಕ್ಷೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ. ಈ ಕಛೇರಿಯಿಂದಲೇ ಏಕರೂಪದ ಸಾಮಾನ್ಯ ಪ್ರಶ್ನೆ ಪತ್ರಿಕೆಯನ್ನು ಸಿದ್ದಪಡಿಸಿ, ದಿನಾಂಕವನ್ನು ನಿಗದಿಗೊಳಿಸಿ, ಡಯಟ್ ಕಛೇರಿಗಳಿಗೆ ನಿಗದಿತ ಸಮಯದಲ್ಲಿ ಒದಗಿಸಲಾಗುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ವಿಭಾಗೀಯ ಸಹನಿರ್ದೇಶಕರ ಮೇಲುಸ್ತುವಾರಿಯಲ್ಲಿ ಆಯಾ ಡಯಟ್ ಕಛೇರಿಗಳು ಸದರಿ ಉಪನಿರ್ದೇಶಕರು(ಆಡಳಿತ) ರವರ ಸಹಯೋಗದೊಂದಿಗೆ ವ್ಯಾಪ್ತಿಯ ಕಛೇರಿಗಳ/ಶಾಲೆಗಳ ಸಿಬ್ಬಂದಿಗಳ ಅಂಕಿ ಅಂಶವನ್ನು ಪಡೆದುಕೊಂಡು ಡಿಸೆಂಬರ್ ಮೊದಲ ವಾರದಲ್ಲಿ ಸಾಮಾನ್ಯ ಪರೀಕ್ಷೆಯನ್ನು ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಪೂರ್ವ ಸಿದ್ದತೆಗಳನ್ನು ಕೈಗೊಳ್ಳತಕ್ಕದ್ದು.

ಯಾವುದೇ ಒಂದು ಜಿಲ್ಲೆಯ ಸಿಬ್ಬಂದಿಗಳ ಉತ್ತರ ಪತ್ರಿಕೆಗಳನ್ನು ಅದೇ ಜಿಲ್ಲೆಯಲ್ಲಿ ಮೌಲ್ಯ ಮಾಪನಕ್ಕೆ ಒಳಪಡಿಸದೇ ಮತ್ತೊಂದು ಜಿಲ್ಲೆಗೆ ಹಂಚಿಕೆ ಮಾಡಲಾಗುವುದು. ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಮೌಲ್ಯಮಾಪಕರನ್ನು ಗುರ್ತಿಸಿ ಡಯಟ್‌ಗಳ ಪ್ರಾಂಶುಪಾಲರು ಸಿದ್ದರಿರತಕ್ಕದ್ದು. ಯಾವ ಜಿಲ್ಲೆಯ ಉತ್ತರ ಪತ್ರಿಕೆಗಳನ್ನು ಯಾವ ಜಿಲ್ಲೆಗೆ ಮೌಲ್ಯಮಾಪನಕ್ಕೆ ಹಂಚಿಕೆ ಮಾಡಲಾಗುವುದು ಎಂಬುದರ ಬಗ್ಗೆ ಪ್ರತ್ಯೇಕವಾಗಿ ಸೂಚನೆಗಳನ್ನು ಹೊರಡಿಸಲಾಗುತ್ತದೆ.

ಡಿಸೆಂಬರ್ ಮೊದಲನೇ ವಾರದಲ್ಲಿ zoom ಮುಖಾಂತರ ನಡೆಯಲಿರುವ ಪರೀಕ್ಷೆಗೆ ಎಲ್ಲಾ ಪೂರ್ವ ಸಿದ್ದತೆಗಳನ್ನು ಕೈಗೊಳ್ಳುವಂತೆ ಸೂಚಿಸಿದೆ.

**ಡಾ.ವಿಶಾಲ್.ಆರ್. ಭಾ.ಆ.ಸೇ**
**ಆಯುಕ್ತರು**

**ಗೆ,**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ಗಳಿಗೆ
2. ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ.
3. ರಾಜ್ಯ ಎಲ್ಲಾ ಸಿ.ಟಿ.ಇ. ಪ್ರಾಂಶುಪಾಲರುಗಳಿಗೆ.

4. ರಾಜ್ಯದ ಎಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
5. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು
6. ರಾಜ್ಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ.

ಪ್ರತಿ:

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
2. ಅಪರ ಆಯುಕ್ತರು, ಧಾರವಾಡ/ಕಲಬುರಗಿ.
3. ಅಧ್ಯಕ್ಷರು, ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಲಿ, ಬೆಂಗಳೂರು.
4. ಕಛೇರಿ ಪ್ರತಿ.